KAMS610042672019

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಪಿರಿಯಾಪಟ್ಟಣ.**

**ಉಪಸ್ಥಿತಿಃ**

**ಶ್ರೀಮತಿ. ಶ್ವೇತ.ಜೆ., ಬಿ.ಕಾಂ., ಎಲ್.ಎಲ್.ಬಿ.,**
**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.,**
**ಪಿರಿಯಾಪಟ್ಟಣ.**

**ಸಿ.ಸಿ.ಸಂಖ್ಯೆ.1500/2019**

ದಿನಾಂಕ 2 ನೇ ಏಪ್ರಿಲ್ ಮಾಹೆ 2026

**ಪಿರ್ಯಾದಿದಾರರು** : ಸರ್ಕಾರದ ಪರವಾಗಿ ಪೊಲೀಸ್ ಉಪ ನಿರೀಕ್ಷಕರು,
ಬೆಟ್ಟದಪುರ ಪೊಲೀಸ್ ಠಾಣೆ,
(ಸಹಾಯಕ ಸರ್ಕಾರಿ ಅಭಿಯೋಜಕರು)

**-ವಿರುದ್ಧ**

**ಆರೋಪಿತರು** : 1. ಅಲ್ತಾಫ್ ಪಾಷ,
ಬಿನ್ ಗೌಸ್ ಪೀರ್,
ವಯಸ್ಸು 52 ವರ್ಷ,
2. ಸಾಕಿಬ್ ಪಾಷ,
ಬಿನ್ ಅಲ್ತಾಫ್ ಪಾಷ,
ವಯಸ್ಸು 21 ವರ್ಷ.
ಇಬ್ಬರ ವಾಸಃ ಹಲಗನಹಳ್ಳಿ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

**(ಆರೋಪಿಗಳ ಪರ ಶ್ರೀ ಎಸ್.ಎನ್.ಜಿ. ವಕೀಲರು)**

| | |
|---|---|
| ಪ್ರಕರಣ ಹೂಡಿದ ದಿನಾಂಕ | 17.09.2019 |

| | |
|---|---|
| ಕೃತ್ಯ ನಡೆದ ದಿನಾಂಕ | 17.09.2019 |
| ಪ್ರಥಮ ವರ್ತಮಾನ ಮಾಹಿತಿದಾರರ ಹೆಸರು | ಶ್ರೀ ನದೀಮ್ ಅಹಮ್ಮದ್ |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | 23.03.2026 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 23.03.2026 |
| ತೀರ್ಪು ನೀಡಿದ ದಿನಾಂಕ | 02.04.2026 |
| ಆರೋಪಿಗಳ ವಿರುದ್ದ ಮಾಡಲಾದ ಆರೋಪ | ಭಾ.ದಂ.ಸಂ.ಕಲಂ. 341, 504, 323, 324 ಮತ್ತು 506 ಸಹವಾಚಕ 34 |
| ನ್ಯಾಯಾಧೀಶರ ತೀರ್ಮಾನ | ಬಿಡುಗಡೆಗೊಳಿಸಲಾಯಿತು |
| ಪಿರ್ಯಾದುದಾರರನ್ನು ಪ್ರತಿನಿಧಿಸು ವಕೀಲರು | ಸ.ಸ.ಅ. |
| ಆರೋಪಿಗಳನ್ನು ಪ್ರತಿನಿಧಿಸುವ ವಕೀಲರು | **ಆರೋಪಿತರ ಪರ ಶ್ರೀ ಎಸ್.ಎನ್.ಜಿ ವಕೀಲರು** |

**(ಶ್ವೇತ.ಜೆ)**
**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,**
**ಪಿರಿಯಾಪಟ್ಟಣ.**

## <u>ತೀರ್ಪು</u>

ಠಾಣಾಧಿಕಾರಿಗಳು, ಬೆಟ್ಟದಪುರ ಪೊಲೀಸ್ ಠಾಣೆ ಇವರು ಆರೋಪಿಗಳ ವಿರುದ್ದ ಭಾ.ದಂ.ಸಂ.ಕಲಂ. 341, 504, 323, 324 ಮತ್ತು 506 ಸಹವಾಚಕ 34 ರ ಅಡಿಯಲ್ಲಿ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯವರ ಪ್ರಕರಣದ ಸಾರಾಂಶ ಈ ಕೆಳಕಂಡಂತೆ ಇರುತ್ತದೆ:-**

ದಿನಾಂಕ 17.09.2019 ರಂದು ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು ಹಲಗನಹಳ್ಳಿ ಗ್ರಾಮದ ಶ್ರೀಮತಿ

ರಾಧಿಯಾಭಿ ರವರ ಬಾಬ್ತು ಹಲಗನಹಳ್ಳಿ ಸರ್ವೆ ನಂ.117/2 ರ ಜಮೀನಿನಲ್ಲಿ ಚಾಸಾ.1 ರವರು ತಮ್ಮ ಬಾಬ್ತು ಟ್ರಾಕ್ಟರಿನಲ್ಲಿ ತಮ್ಮ ಜಮೀನನ್ನು ಉಳುಮೆ ಮಾಡಿ, ಚಾಲನೆ ಮಾಡಿಕೊಂಡು ಬರುತ್ತಿದ್ದಾಗ 1 ನೇ ಆರೋಪಿಯು ಚಾಸಾ.1 ರವರ ಟ್ರಾಕ್ಟರನ್ನು ನಿಲ್ಲಿಸಿ ಇದು ಯಾರಪ್ಪನ ಜಮೀನು ಇಲ್ಲಿ ಯಾಕೇ ಟ್ರಾಕ್ಟರ್ ಚಾಲನೆ ಮಾಡಿಕೊಂಡು ಹೋಗುತ್ತಿದ್ದಿಯಾ ಲೋಫರ್ ನನ್ನ ಮಗನೆ ಎಂದು ಇತ್ಯಾದಿಯಾಗಿ ಬಾಯಿಗೆ ಬಂದಂತೆ ಅವಾಚ್ಯವಾಗಿ ಬೈಯುತ್ತಿದ್ದಾಗ, ಚಾಸಾ.1 ರವರು ಟ್ರಾಕ್ಟರ್ ನಿಂದ ಇಳಿದು ಯಾಕೇ ಗಲಾಟೆ ಮಾಡುತ್ತಿಯಾ ನಾವು ಜಮೀನನ್ನು ಲೀಜ್ ಗೆ ಮಾಡಿ ಕೊಂಡಿದ್ದೀವಿ ಎಂದು ಹೇಳಿದಕ್ಕೆ 1 ನೇ ಆರೋಪಿಯು ಇದು ನಿಮ್ಮ ಅಪ್ಪನ ಜಮೀನು ಅಲ್ಲ ಎಂದು ಹೀನಾಮಾನವಾಗಿ ಬೈಯ್ದು, ಚಾಸಾ.1 ರವರನ್ನು ಮುಂದಕ್ಕೆ ಹೋಗದಂತೆ ತಡೆದು ಅಡ್ಡಗಟ್ಟಿ ಹಿಡಿದು ಎಳೆದಾಡಿ ಕೈನಿಂದ ಚಾಸಾ.1 ರವರ ಬೆನ್ನಿಗೆ, ಎದೆಗೆ, ಮೈಕೈಗೆ ಹೊಡೆದು ಕೆಳಕ್ಕೆ ಕೆಡವಿ, ಚಾಸಾ.1 ರವರ ಎಡಕೈನ ಮಧ್ಯ ಬೆರಳು ಮತ್ತು ಉಂಗುರ ಬೆರಳನ್ನು ಬಾಯಿಯಿಂದ ಕಚ್ಚಿ ಗಾಯಗೊಳಿಸಿದ್ದು, ಅಷ್ಟರಲ್ಲಿ 2 ನೇ ಆರೋಪಿಯು ಹಿಂಬದಿಯಿಂದ ಬಂದು ಬಿದುರಿನ ಒಂದು ದೊಣ್ಣೆಯಿಂದ ಚಾಸಾ.1 ರವರ ತಲೆಗೆ ಹಾಗೂ ಹಣೆಗೆ ಹೊಡೆದು ಗಾಯಗೊಳಿಸಿದ್ದು, ನಂತರ ಆರೋಪಿಗಳು ಇವತ್ತು ಬದುಕಿಕೊಂಡಿದ್ದೀಯಾ ನಿನ್ನನ್ನು ಸುಮ್ಮನೇ ಬಿಡುವುದಿಲ್ಲ ಎಂದು ಚಾಸಾ.1 ರವರಿಗೆ ಬೆದರಿಕೆ ಹಾಕಿರುತ್ತಾರೆ.

**3.** ದಿನಾಂಕ 17.09.2019 ರಂದು ಚಾಸಾ.10- ವಿಜಯೇಂದ್ರ.ಪಿ.ಟಿ. ರವರು ಚಾಸಾ.1-ನದೀಮ್ ಅಹಮ್ಮದ್‌ರವರು ನೀಡಿದ ದೂರನ್ನು ಪಡೆದುಕೊಂಡು, ಠಾಣಾ ಅಪರಾಧ ಸಂಖ್ಯೆ:140/2019 ರಂತೆ ಭಾ. ದಂ. ಸಂ.

ಕಲಂ.341, 504, 323, 324 ಮತ್ತು 506 ಸಹವಾಚಕ 34 ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ ತನಿಖೆ ಪೂರೈಸಿ, ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿರುತ್ತಾರೆ.

**4.** ದೋಷರೋಪಣಾ ಪಟ್ಟಿಯನ್ನು ಸ್ವೀಕರಿಸಿ, ಆರೋಪಿಗಳು ಮಾಡಿದ ಅಪರಾಧಕ್ಕಾಗಿ ಭಾ. ದಂ. ಸಂ. ಕಲಂ. 341, 504, 323, 324 ಮತ್ತು 506 ಸಹವಾಚಕ 34 ಗಳಿಗೆ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿಗಳು ವಕೀಲರನ್ನು ನೇಮಿಸಿಕೊಂಡು ಜಾಮೀನು ಪಡೆದುಕೊಂಡಿರುತ್ತಾರೆ. ಆರೋಪಿಗಳಿಗೆ ಅಭಿಯೋಜನೆಯವರ ದಾಖಲೆಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿಯಲ್ಲಿ ಪೂರೈಸಲಾಗಿರುತ್ತದೆ. ಆರೋಪಿಗಳ ಮೇಲೆ ಮಾಡಿದ ಆರೋಪಕ್ಕೆ ದೋಷಾರೋಪಣಾ ಪಟ್ಟಿಯನ್ನು ಭಾ.ದಂ.ಸಂ.ಕಲಂ. 341, 504, 323, 324 ಮತ್ತು 506 ಸಹವಾಚಕ 34 ರಂತೆ ರಚಿಸಿ ಓದಿ ಹೇಳಲಾಯಿತು. ಆರೋಪಿಗಳು ತಮ್ಮ ತಪ್ಪನ್ನು ಒಪ್ಪಿಕೊಳ್ಳದೆ ವಿಚಾರಣೆ ಆಗಬೇಕೆಂದು ಕೇಳಿದ ಕಾರಣ ಪ್ರಕರಣವನ್ನು ವಿಚಾರಣೆಗೆ ಮುಂದೂಡಲಾಯಿತು.

**5.** ಆರೋಪಿಗಳ ಮೇಲೆ ಮಾಡಿದ ಆರೋಪಣೆಯನ್ನು ಸಾಭೀತುಪಡಿಸಲು ಅಭಿಯೋಜನೆಯು ಚಾಸಾ-1 ರವರನ್ನು ಪ್ರಾಸಾ-1 ರಂತೆ ಸಾಕ್ಷಿಗೆ ಒಳಪಡಿಸಿ, ನಿಪಿ.1 ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ದೂರುದಾರರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದು, ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ, ಇತರೆ ಸಾಕ್ಷಿದಾರರಿಗೆ ಸಮನ್ಸ್ ನೀಡುವ ಅಭಿಯೋಜನೆಯ ಕೋರಿಕೆಯನ್ನು ನಿರಾಕರಿಸಲಾಯಿತು. ಆದ್ದರಿಂದ

ಆರೋಪಿತರನ್ನು ಭಾ.ದಂ.ಸಂ.ಕಲಂ.313 ರ ಅಡಿಯಲ್ಲಿ ವಿಚಾರಣೆಗೆ ಒಳಪಡಿಸಿರುವುದಿಲ್ಲ.

**6.** ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಕೇಳಲಾಯಿತು.

**7. ಈ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಉದ್ಭವಿಸಿರುತ್ತವೆ.**

**ಅಂಶಗಳು**

**1 ನೇ ಅಂಶ:** ದಿನಾಂಕ 17.09.2019 ರಂದು ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು ಹಲಗನಹಳ್ಳಿ ಗ್ರಾಮದ ಶ್ರೀಮತಿ ರಾಧಿಯಾಬಿ ರವರ ಬಾಬ್ತು ಹಲಗನಹಳ್ಳಿ ಸರ್ವೆ ನಂ.117/2 ರ ಜಮೀನಿನಲ್ಲಿ ಚಾಸಾ.1 ರವರು ತಮ್ಮ ಬಾಬ್ತು ಟ್ರಾಕ್ಟರಿನಲ್ಲಿ ತಮ್ಮ ಜಮೀನನ್ನು ಉಳುಮೆ ಮಾಡಿ, ಚಾಲನೆ ಮಾಡಿಕೊಂಡು ಬರುತ್ತಿದ್ದಾಗ 1 ನೇ ಆರೋಪಿಯು ಚಾಸಾ.1 ರವರ ಟ್ರಾಕ್ಟರನ್ನು ನಿಲ್ಲಿಸಿ ಇದು ಯಾರಪ್ಪನ ಜಮೀನು ಇಲ್ಲಿ ಯಾಕೇ ಟ್ರಾಕ್ಟರ್ ಚಾಲನೆ ಮಾಡಿಕೊಂಡು ಹೋಗುತ್ತಿದ್ದಿಯಾ ಲೋಫರ್ ನನ್ನ ಮಗನೆ ಎಂದು ಇತ್ಯಾದಿಯಾಗಿ ಬಾಯಿಗೆ ಬಂದಂತೆ ಅವಾಚ್ಯವಾಗಿ ಬೈಯುತ್ತಿದ್ದಾಗ, ಚಾಸಾ.1 ರವರು ಟ್ರಾಕ್ಟರ್ ನಿಂದ ಇಳಿದು ಯಾಕೇ ಗಲಾಟೆ ಮಾಡುತ್ತಿಯಾ ನಾವು ಜಮೀನನ್ನು ಲೀಜ್ ಗೆ ಮಾಡಿ ಕೊಂಡಿದ್ದೀವಿ ಎಂದು ಹೇಳಿದಕ್ಕೆ 1 ನೇ ಆರೋಪಿಯು ಇದು ನಿಮ್ಮ ಅಪ್ಪನ ಜಮೀನು ಅಲ್ಲ ಎಂದು ಹೀನಾಮಾನವಾಗಿ ಬೈಯ್ದು, ಚಾಸಾ.1 ರವರನ್ನು ಮುಂದಕ್ಕೆ ಹೋಗದಂತೆ ತಡೆದು ಅಡ್ಡಗಟ್ಟಿ ಹಿಡಿದು ಎಳೆದಾಡಿ ಕೈನಿಂದ ಚಾಸಾ.1 ರವರ ಬೆನ್ನಿಗೆ, ಎದೆಗೆ, ಮೈಕೈಗೆ ಹೊಡೆದು ಕೆಳಕ್ಕೆ ಕೆಡವಿ, ಚಾಸಾ.1 ರವರ ಎಡಕೈನ ಮಧ್ಯ ಬೆರಳು ಮತ್ತು ಉಂಗುರ ಬೆರಳನ್ನು ಬಾಯಿಯಿಂದ ಕಚ್ಚಿ ಗಾಯಗೊಳಿಸಿದ್ದು, ಅಷ್ಟರಲ್ಲಿ 2 ನೇ ಆರೋಪಿಯು ಹಿಂಬದಿಯಿಂದ ಬಂದು

ಬಿದುರಿನ ಒಂದು ದೊಣ್ಣೆಯಿಂದ ಚಾಸಾ.1 ರವರ ತಲೆಗೆ ಹಾಗೂ ಹಣೆಗೆ ಹೊಡೆದು ಗಾಯಗೊಳಿಸಿದ್ದು, ನಂತರ ಆರೋಪಿಗಳು ಇವತ್ತು ಬದುಕಿಕೊಂಡಿದ್ದೀಯಾ ನಿನ್ನನ್ನು ಸುಮ್ಮನೇ ಬಿಡುವುದಿಲ್ಲ ಎಂದು ಚಾಸಾ.1 ರವರಿಗೆ ಬೆದರಿಕೆ ಹಾಕಿರುತ್ತಾರೆ. ಆ ಮೂಲಕ ಆರೋಪಿಗಳು **ಭಾರತ ದಂಡ ಸಂಹಿತೆ ಕಲಂ.341, 504, 323, 324 ಮತ್ತು 506 ಸಹವಾಚಕ 34** ಅಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುವರೇ ?

2 **ನೇ ಅಂಶ:** ಯಾವ ಆದೇಶ ?

**8.** ಮೇಲ್ಕಂಡ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಅಂಶ-1 : **"ನಕರಾತ್ಮಕವಾಗಿ"**

ಅಂಶ-2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

## ಕಾರಣಗಳು

**9. ಅಂಶ-1** : ಅಭಿಯೋಗದವರ ವಾದದಂತೆ ದಿನಾಂಕ 17.09.2019 ರಂದು ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು ಹಲಗನಹಳ್ಳಿ ಗ್ರಾಮದ ಶ್ರೀಮತಿ ರಾಧಿಯಾಭಿ ರವರ ಬಾಬ್ತು ಹಲಗನಹಳ್ಳಿ ಸರ್ವೆ ನಂ.117/2 ರ ಜಮೀನಿನಲ್ಲಿ ಚಾಸಾ.1 ರವರು ತಮ್ಮ ಬಾಬ್ತು ಟ್ರಾಕ್ಟರಿನಲ್ಲಿ ತಮ್ಮ ಜಮೀನನ್ನು ಉಳುಮೆ ಮಾಡಿ, ಚಾಲನೆ ಮಾಡಿಕೊಂಡು ಬರುತ್ತಿದ್ದಾಗ 1 ನೇ ಆರೋಪಿಯು ಚಾಸಾ.1 ರವರ ಟ್ರಾಕ್ಟರನ್ನು ನಿಲ್ಲಿಸಿ ಇದು ಯಾರಪ್ಪನ ಜಮೀನು ಇಲ್ಲಿ ಯಾಕೇ ಟ್ರಾಕ್ಟರ್ ಚಾಲನೆ ಮಾಡಿಕೊಂಡು ಹೋಗುತ್ತಿದ್ದಿಯಾ ಲೋಫರ್ ನನ್ನ ಮಗನೆ ಎಂದು

ಇತ್ಯಾದಿಯಾಗಿ ಬಾಯಿಗೆ ಬಂದಂತೆ ಅವಾಚ್ಯವಾಗಿ ಬೈಯುತ್ತಿದ್ದಾಗ, ಚಾಸಾ.1 ರವರು ಟ್ರಾಕ್ಟರ್ ನಿಂದ ಇಳಿದು ಯಾಕೇ ಗಲಾಟೆ ಮಾಡುತ್ತಿಯಾ ನಾವು ಜಮೀನನ್ನು ಲೀಜ್ ಗೆ ಮಾಡಿ ಕೊಂಡಿದ್ದೀವಿ ಎಂದು ಹೇಳಿದಕ್ಕೆ 1 ನೇ ಆರೋಪಿಯು ಇದು ನಿಮ್ಮ ಅಪ್ಪನ ಜಮೀನು ಅಲ್ಲ ಎಂದು ಹೀನಾಮಾನವಾಗಿ ಬೈಯ್ದು, ಚಾಸಾ.1 ರವರನ್ನು ಮುಂದಕ್ಕೆ ಹೋಗದಂತೆ ತಡೆದು ಅಡ್ಡಗಟ್ಟಿ ಹಿಡಿದು ಎಳೆದಾಡಿ ಕೈನಿಂದ ಚಾಸಾ.1 ರವರ ಬೆನ್ನಿಗೆ, ಎದೆಗೆ, ಮೈಕೈಗೆ ಹೊಡೆದು ಕೆಳಕ್ಕೆ ಕೆಡವಿ, ಚಾಸಾ.1 ರವರ ಎಡಕೈನ ಮಧ್ಯ ಬೆರಳು ಮತ್ತು ಉಂಗುರ ಬೆರಳನ್ನು ಬಾಯಿಯಿಂದ ಕಚ್ಚಿ ಗಾಯಗೊಳಿಸಿದ್ದು, ಅಷ್ಟರಲ್ಲಿ 2 ನೇ ಆರೋಪಿಯು ಹಿಂಬದಿಯಿಂದ ಬಂದು ಬಿದುರಿನ ಒಂದು ದೊಣ್ಣೆಯಿಂದ ಚಾಸಾ.1 ರವರ ತಲೆಗೆ ಹಾಗೂ ಹಣೆಗೆ ಹೊಡೆದು ಗಾಯಗೊಳಿಸಿದ್ದು, ನಂತರ ಆರೋಪಿಗಳು ಇವತ್ತು ಬದುಕಿಕೊಂಡಿದ್ದೀಯಾ ನಿನ್ನನ್ನು ಸುಮ್ಮನೇ ಬಿಡುವುದಿಲ್ಲ ಎಂದು ಚಾಸಾ.1 ರವರಿಗೆ ಬೆದರಿಕೆ ಹಾಕಿರುತ್ತಾರೆಂದು ಅಭಿಯೋಗದವರು ವಾದ ಮಂಡಿಸಿರುತ್ತಾರೆ.

**10.** ಅಭಿಯೋಜಕರು ಆರೋಪಣೆಯನ್ನು ಸಾಬೀತುಪಡಿಸಲು ಈ ಪ್ರಕರಣದಲ್ಲಿ ದೂರುದಾರರಾದ ಚಾಸಾ.1/ಪ್ರಾಸಾ.1-ನದೀಮ್ ಅಹಮದ್ ರವರನ್ನು ಸಾಕ್ಷಿಗೆ ಒಳಪಡಿಸಿರುತ್ತಾರೆ. ಈ ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಆರೋಪಿತರ ಪರಿಚಯ ಇದ್ದು, ತನಗೆ ಚಾಸಾ.2 ಮತ್ತು 3 ರವರ ಪರಿಚಯ ಇದ್ದು, ತನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ, ಆರೋಪಿತರು ಯಾವತ್ತೂ ಸಹ ತನ್ನೊಂದಿಗೆ ಜಗಳ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಅಕ್ರಮ ತಡೆಯುಂಟು ಮಾಡಿರುವುದಿಲ್ಲ, ಕೈಯಿಂದ ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿ ಗಾಯ ಉಂಟು ಮಾಡಿರುವುದಿಲ್ಲ ಮತ್ತು ಕೊಲೆ

ಬೆದರಿಕೆ ಹಾಕಿರುವುದಿಲ್ಲ. ಈ ಸಂಬಂಧ ತಾನು ಆರೋಪಿತರ ವಿರುದ್ಧ ಯಾವುದೇ ದೂರು ನೀಡಿರುವುದಿಲ್ಲ ಎಂದು ವ್ಯತಿರಿಕ್ತವಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾಡಿದ ಪಾಟೀ ಸವಾಲಿನಲ್ಲಿ ತಾವು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಉಳಿದಂತೆ ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಅಭಿಯೋಜನೆಯು ದೂರುದಾರರಾದ ಪ್ರಾಸಾ-1 ರವರನ್ನು ಪಾಟೀ ಸವಾಲು ಮಾಡಿದರೂ, ಪ್ರಕರಣವನ್ನು ಬೆಂಬಲಿಸುವಂತಹ ಯಾವುದೇ ಅಂಶಗಳನ್ನು ಹೊರತರಿಸುವಲ್ಲಿ ಅಭಿಯೋಜನೆಯು ವಿಫಲಗೊಂಡಿದೆ.

**11.** ಅಭಿಯೋಜನೆಯ ಪರ ಹಾಜರುಪಡಿಸಲಾದ ಸಾಕ್ಷ್ಯಾದಾರಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ನೋಡಿದಾಗ, ಸ್ವತಃ ದೂರುದಾರರು ಅಭಿಯೋಜನೆಯ ಪರ ಸಾಕ್ಷ್ಯ ನುಡಿಯದೇ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುತ್ತಾರೆ ಹಾಗೂ ತಾನು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಆದ್ದರಿಂದ ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಭೀತುಪಡಿಸಲು ವಿಪಲಗೊಂಡಿರುತ್ತದೆ. ಈ ಎಲ್ಲಾ ಕಾರಣಗಳಿಂದ ಅಭಿಯೋಜನೆಯು ತಮ್ಮ ಪ್ರಕರಣವನ್ನು ನಿಸ್ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿದೆ ಎಂದು ಪರಿಗಣಿಸಿ ಆರೋಪಿಗಳನ್ನು ಶಿಕ್ಷಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಿರ್ಧರಿಸಿ, ಮೇಲ್ಕಂಡ 1 ನೇ ಅಂಶವನ್ನು **ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

**12.** **ಅಂಶ-2:** ಅಂಶ-1 ರಲ್ಲಿ ವಿವರಿಸಿದ ಕಾರಣದಿಂದ ಅಭಿಯೋಜನೆಯವರು ಆರೋಪಿಗಳ ಮೇಲೆ ಮಾಡಿದ ಆರೋಪಣೆಯನ್ನು

ಸಾಬೀತು ಮಾಡಲು ವಿಫಲರಾಗಿರುತ್ತಾರೆಂದು ತೀರ್ಮಾನಿಸುತ್ತಾ ಈ ಕೆಳಗಿನಂತೆ ಆದೇಶ ಮಾಡಲಾಗಿದೆ,

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1)ರಡಿ ಆರೋಪಿಗಳನ್ನು ಭಾರತ ದಂಡ ಸಂಹಿತೆ ಕಲಂ. 341, 504, 323, 324 ಮತ್ತು 506 ಸಹವಾಚಕ 34ರ ಅಡಿಯಲ್ಲಿ ಶಿಕ್ಷಾರ್ಹ ಆರೋಪಗಳಿಂದ ದೋಷಮುಕ್ತರೆಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ದಂಡ ಪ್ರಕ್ರಿಯ ಸಂಹಿತೆ ಕಲಂ.437(ಎ)ರಂತೆ ಆರೋಪಿಗಳ ಮತ್ತು ಜಾಮೀನುದಾರರ ಮುಚ್ಚಳಿಕೆ ಪತ್ರಗಳು ಈ ದಿನದಿಂದ 6 ತಿಂಗಳ ಕಾಲ ಅಥವಾ ಯಾವುದೇ ಮೇಲ್ಮನವಿಗೆ ಸಂಬಂಧಿಸಿದಂತೆ ನೋಟಿಸ್ ನೀಡುವವರೆಗೆ ಜಾರಿಯಲ್ಲಿರುತ್ತದೆ.

ಪಿ.ಎಫ್.ಸಂಖ್ಯೆ:163/2019 ರಲ್ಲಿರುವ ಐಟಂ ನಂ.1 ಬಿದುರಿನ ದೊಣ್ಣೆ ಬೆಲೆ ಬಾಳದ ವಸ್ತುವಾದ್ದರಿಂದ ಅದನ್ನು ಮೇಲ್ಮನವಿಯ ಅವಧಿ ಮುಗಿದ ನಂತರ ನಾಶಪಡಿಸಲು ಕಚೇರಿಗೆ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಗಣಕ ಯಂತ್ರದ ಮೂಲಕ ನೇರವಾಗಿ ಬೆರಳಚ್ಚು ಮಾಡಿಸಿ ಓದಿ ತಿದ್ದಿ ಇಂದು ಅಂದರೆ ದಿನಾಂಕ 2ನೇ ಏಪ್ರಿಲ್ ಮಾಹೆ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

Digitally signed by SHWETHA JANARDHAN
Location: I Addl.Civil Judge and JMFC., Periyapatna

**(ಶ್ವೇತ.ಜೆ)**

**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,**

**ಪಿರಿಯಾಪಟ್ಟಣ.**

**ಅನುಬಂಧ**

**ಅಭಿಯೋಜನೆಯವರ ಪರ ವಿಚಾರಣೆಗೊಳಪಡಿಸಿದ ಸಾಕ್ಷಿಗಳು:**

| | |
|---|---|
| ಪ್ರಾ.ಸಾ.1 | ನದೀಮ್ ಅಹಮಂ್ |

**ಅಭಿಯೋಜನೆಯವರ ಪರ ಗುರುತಿಸಲಾದ ದಾಖಲೆಗಳು:**

| | |
|---|---|
| ನಿಪಿ.1 | ದೂರು |
| ನಿಪಿ.1(ಎ) | ಪ್ರಾ.ಸಾ.1 ರವರ ಸಹಿ |

**ಆರೋಪಿಗಳ ಪರ ವಿಚಾರಣೆಗೊಳಪಡಿಸಿದ ಸಾಕ್ಷಿಗಳು ಮತ್ತು ಗುರುತಿಸಲಾದ ದಾಖಲಾತಿಗಳು:**

| |
|---|
| **ಇಲ್ಲ** |

**ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆ ಮಾಲುಗಳು:**

| |
|---|
| **ಇಲ್ಲ** |

Digitally signed by
SHWETHA JANARDHAN
Location: I Addl.Civil Judge
and JMFC., Periyapatna

**(ಶ್ವೇತ.ಜೆ)**

**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದನ್ಯಾ.ದಂ.,**

**ಪಿರಿಯಾಪಟ್ಟಣ.**